

ಸಂಗಾತಿಯನ್ನು
ಕರೆಯುತ್ತಿರುವ
ಕಪ್ಪೆ

ಬಂದಾಗ ಕಾಣಸಿಗುತ್ತಿದ್ದ ವೈವಿಧ್ಯಮಯ ಕಪ್ಪೆಗಳನ್ನು ಕಾಣುವ ಕುತೂಹಲವೂ ಬೆಳೆಯುತ್ತಲೇ ಇತ್ತು.

ಮಲೆನಾಡಿನಲ್ಲಿ ಮುಂದಿನ ಬಾಗಿಲುಗಳು ಸಾಮಾನ್ಯವಾಗಿ ಎರಡು ಭಾಗಗಳಾಗಿರುತ್ತವೆ. ಮೇಲಿನರ್ಧ ತೆರೆದು, ಕೆಳಗಿನರ್ಧ ಬಾಗಿಲನ್ನು ಮುಚ್ಚಿ ಹೊರಗಡೆ ಬೀಳುತ್ತಿದ್ದ ಮಳೆಯನ್ನು ಆಸ್ವಾದಿಸುವುದೇ ಚಂದ. ಆರಂಭದ ದಿನಗಳು ಮಳೆಗಾಲವಾಗಿದ್ದುದರಿಂದ ಮನೆಯಿಂದ ಹೊರಗಡೆ ಹೋಗುವಾಗಲೋ ಅಥವಾ ಒಳಗಡೆ ಬರುವಾಗಲೋ ಸಣ್ಣ ಸಣ್ಣ ಕಪ್ಪೆಗಳು ನೆಗೆದು ಮನೆಯೊಳಗೆ ಪ್ರವೇಶಿಸಿ ಬಿಡುತ್ತಿದ್ದವು. ಅವುಗಳನ್ನು ಕಪ್ಪೆ ಮರಿಗಳು ಎಂದು ಭಾವಿಸಿದ್ದ ನನಗೆ ತದನಂತರ ತಿಳಿಯಿತು, ಅವುಗಳೂ ಬೆಳೆದ ಕಪ್ಪೆಗಳೇ ಎಂದು. ಅವುಗಳೇ 'ಆರ್ನಮೆಂಟೆಡ್ ಪಿಗ್ಮಿ ಫ್ರಾಗ್'.



ಮಲಬಾರ್ ಗ್ಲೈಡಿಂಗ್
ಕಪ್ಪೆ ಮೊಟ್ಟೆ

ಗೆಳೆಯರ ಜೊತೆ ಬಾಡಿಗೆ ಮನೆಯಲ್ಲಿ ಇದ್ದುದರಿಂದ ಮನೆಯಲ್ಲಿ ಮಲಗಲು ಮಂಚ ಮಾತ್ರ ಇತ್ತೇ ಹೊರತು ಅಡುಗೆ ಶಾಸ್ತ್ರ ನೆಲದ ಮೇಲೆ ಸಾಗುತ್ತಿತ್ತು. ಒಮ್ಮೆ ಊಟ ಮಾಡಲು ಅನ್ನ ಮತ್ತು ಸಾರು ಹಾಕಿ ಅರ್ಧ ಊಟ ಮಾಡಿದ್ದೆ. ಉಳಿದ ಅನ್ನವನ್ನು ತಿನ್ನಲು ಕಲಸುವಾಗಲೆ ಸಿಕ್ಕಿದ್ದು ಅಂತಹ ಸಣ್ಣ ಕಪ್ಪೆಯ ಮೃತದೇಹ. ಇದ್ಯಾವಾಗ ನೆಗೆದು ಸಾರಿಗೆ ಬಿತ್ತಪ್ಪ ಎಂದು ಊಟ ಬಿಸಾಡಿ ಕೆಲಸಕ್ಕೆ ಯೋಚಿಸುತ್ತಾ ಹೊರಟೆ. ಆದರೆ ಇದನ್ನು ಗೆಳೆಯರಿಗೆ ಮಾತ್ರ ಹೇಳಲಿಲ್ಲ. ಉತ್ತರವೂ ಸಿಗಲಿಲ್ಲ!

ನಾನು ಇರುವ ಸ್ಥಳದಲ್ಲಿ ಒಮ್ಮೆ ಡಾ. ಬಿಷನ್ ಎಂಬುವವರು, 'ಕಪ್ಪೆ ಹೊಡೆಯಲು ಬರುತ್ತೀರಾ ಸರ್?' ಎಂದರು. ವನ್ಯಜೀವಿಗಳ ಛಾಯಾಗ್ರಹಣದಲ್ಲಿ ಆಸಕ್ತಿ ಇದ್ದುದರಿಂದ ಕೂಡಲೇ ಒಪ್ಪಿದೆ. 'ರಾತ್ರಿ 9 ಗಂಟೆಗೆ ರೆಡಿ ಇರಿ ಸರ್' ಎಂದು ಹೇಳಿ ಹೋದರು. ರಾತ್ರಿ ಗೋಣಿಕೊಪ್ಪಲಿನ ಸಮೀಪದ ಒಂದು ಪಾಳು ತೋಪಿನಂತಿದ್ದ ಜಾಗದ ಬಳಿ ವಾಹನ ನಿಲ್ಲಿಸಿ ಕ್ಯಾಮೆರಾ, ಟಾರ್ಚ್ ಹಿಡಿದುಕೊಂಡು ಅದರೊಳಗಿದ್ದ ಕೊಳದ ಒಳಗಡೆ ಮತ್ತೊಬ್ಬ ಗೆಳೆಯರ ಸಹಾಯದಿಂದ ಇಳಿದರು. ನನ್ನನ್ನು ಕೈ ಹಿಡಿದು ಇಳಿಸಿಕೊಂಡರು. ಮಳೆ ಬಿದ್ದುದರಿಂದ ಮಣ್ಣು ಸ್ಕೇಟಿಂಗ್ ಆಡುವಂತೆ ಜಾರುತ್ತಿತ್ತು. ನಾನೋ ಇಳಿಜಾರಿನಲ್ಲಿ ಜಾರಿ ಜಾರಿ ಅದ್ಹೇಗೋ ಸಂಭಾಳಿಸಿಕೊಂಡು ನಿಲ್ಲುತ್ತಿದ್ದೆ. ಆ ಕ್ಷಣದಲ್ಲಿ, ಟಾರ್ಚ್ ಬೆಳಕಿನಲ್ಲಿ ಕಂಡದ್ದು ಮಾತ್ರ ಬೆರಗು ಮೂಡಿಸಿತು.

'ರಾಕೊಫೋರಸ್ ಲ್ಯಾಟರಲಿಸ್' ಎಂಬ ವೈಜ್ಞಾನಿಕ ಹೆಸರಿನ ಮರಗಪ್ಪೆ, ಮೊಟ್ಟೆಗಳನ್ನು ಉರುಚಲು

